ಕೈಬಿಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಜವಾಬ್ದಾರಿ ಸ್ಥಾನದಲ್ಲಿರುವವರು ತಮ್ಮ ಮನೆಗಳನ್ನು ತಮ್ಮ ಹೆಂಡತಿಯ ಹೆಸರಿನಲ್ಲಿ ಇದೆ ಎಂದು ಹೇಳಿ ಸರ್ಕಾರದಿಂದ ಬಾಡಿಗೆ ತೆಗೆದುಕೊಳ್ಳುವಂತಹ ನಿದರ್ಶನಗಳೂ ಇವೆ. ನನಗೆ ಹೆಸರು ಹೇಳುವುದಕ್ಕೆ ಇಷ್ಟ ಇಲ್ಲ. ಏಕೆಂದರೆ ಎಲ್ಲರೂ ಸಮಾರಾಗಿ ನನ್ನ ಹಳೆಯ ಗೆಳೆಯರು, ಆದ್ದರಿಂದ ಇದನ್ನು ತಾವು ತನಿಖೆ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ ಹೆಚ್. ಪಾಟೀಲ್.—ಸನ್ಮಾನ್ಯ ಸದಸ್ಯರ ಮನಸ್ಸಿನ ವೇದನೆ ಅರ್ಥ ನನಗೆ ಆಗಿದೆ. ಮಂತ್ರಿಗಳಾಗಿ ನಾವು ಯಾವ ಮನೆಗಳನ್ನೂ ಸಹ ಕೊಟ್ಟಿರುವುದು ದಾಖಲೆಯಲ್ಲಿ ಇಲ್ಲ. ಮಂತ್ರಿಗಳು ಖಾಸಗಿಯಾಗಿ ಮನೆಗಳನ್ನು ತೆಗೆದುಕೊಂಡಿದ್ದರೆ ನಮ್ಮ ನಜರಿಗೆ ಬರುವುದಿಲ್ಲ. ಏಕೆಂದರೆ ಸರ್ಕಾರದಿಂದ ಆದೇಶವನ್ನು ಕೊಟ್ಟು ಮಂತ್ರಿಗಳಿಗೆ ಮನೆಯನ್ನು ಅಲಾಟ್ ಮಾಡಿರುವುದು ಯಾವ ಮಂತ್ರಿಗಳೂ ಮಾಡಿಲ್ಲ. ಇನ್ನು ಐ ಎ ಎಸ್ ಅಧಿಕಾರಿಗಳಿಗೆ ಮೂರು ಜನರಿಗೆ ಮಾಡಿದ್ದೇವೆ. ಆದರಲ್ಲಿ ಇಬ್ಬರು ಮಾತ್ರ ಮನೆಗಳನ್ನು ತೆಗೆದುಕೊಂಡಿದ್ದಾರೆ. ಒಬ್ಬರೂ ಇನ್ನೂ ತೆಗೆದುಕೊಂಡಿಲ್ಲ. ಮಾನ್ಯ ಸದಸ್ಯರು ಕೆಲವು ಜನರು ಬೇರೆ ಬೇರೆ ಹೆಸರಿನಲ್ಲಿ ಮನೆಗಳನ್ನು ಹೊಂದಿದ್ದಾರೆ ಎಂದು ಹೇಳಿದ್ದಾರೆ. ಈಗ ಘಟನಾತ್ಮಕವಾಗಿ ಅವರಿಗೆ ಹಕ್ಕುಗಳನ್ನು ನಾವು ಮೊಟಕು ಮಾಡುವುದಕ್ಕೆ ಬರುವುದಿಲ್ಲ. ಆದರೆ ಸರ್ಕಾರದ ರೀತಿಯಿಂದ ಯಾವುದಾದರೂ ಪಂಚನೆ ಆಗಿದ್ದರೆ, ಅದನ್ನು ನನ್ನ ಗಮನಕ್ಕೆ ತಂದುಕೊಟ್ಟರೆ ನಾನು ನಿಜವಾಗಿ ಪರಿಶೀಲನೆ ಮಾಡುತ್ತೇನೆ. ಹೆಂಡತಿ ಹೆಸರಿನಲ್ಲಿ ಮನೆ ಇರಬಾರದು ಎಂದು ನಾವು ಹೇಳಲಿಕ್ಕೆ ಬರುವುದಿಲ್ಲ. ಹೆಂಡತಿಯ ಹೆಸರಿನಲ್ಲಿ ಮನೆ ಇರಲಿಕ್ಕೆ ಅಧಿಕಾರ ಇದೆ. ಗಂಡನ ಹೆಸರಿನಲ್ಲಿ ಮನೆ ಇರಲಿಕ್ಕೆ ಅಧಿಕಾರ ಇದೆ. ಆದರೆ ಸರ್ಕಾರಕ್ಕೆ ಇದರಿಂದ ಏನಾದರೂ ವಂಚನೆ ಆಗಿದ್ದರೆ ಮಾನ್ಯ ಸದಸ್ಯನ ಮನೋಗತವನ್ನು ಅರ್ಥ ಮಾಡಿಕೊಂಡ. ಆ ಬಗ್ಗೆ ಯೋಗ್ಯವಾದ ತನಿಖೆಯನ್ನು ಮಾಡೋಣ. ಎರಡನೆಯದಾಗಿ ಐಎಎಸ್ ಅಧಿಕಾರಿಗಳು ಮತ್ತು ಮಂತ್ರಿಗಳು ಮನೆಗಳನ್ನು ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ. ಒಂದು ವೇಳೆ ಮಂತ್ರಿಗಳಿಗೆ ಸರಿಯಾದ ಮನೆ ಸಿಗದೆ ಇದ್ದರೆ ಅವರು ಬೇಡಿದರೂ ಸಹ ಅಲಾಟ್ ಮಾಡಲಿಕ್ಕೆ ತಪ್ಪು ಏನು ಇದೆ, ಎಂಎಲ್‌ಎಗಳಿಗೆ ಅಲಾಟ್ ಮಾಡಿದರೆ ತಪ್ಪು ಏನು ಇದೆ ? ಈ ದೃಷ್ಟಿಯಿಂದ ಮಂತ್ರಿಗಳ ದರೂ ಸಹ ಅವರೂ ಮನುಷ್ಯ ವರ್ಗದವರೇ. ಎಂಬುದು ನಮ್ಮ ಗಮನದಲ್ಲಿರಬೆಕು. ಎಲ್ಲಿ ಸರ್ಕಾರಿ ಮನೆಗಳು ಸಿಗುತ್ತವೆ ಅಲ್ಲಿ ಮಾತ್ರ ರೆಂಟ್ ಕಂಟ್ರೋಲ್‌ನಿಂದ ಮನೆ ತೆಗೆದುಕೊಂಡು ಉಳಿದ ಜನರಿಗೆ ಅನ್ಯಾಯ ಆಗಬಾರದು ಎನ್ನುವ ಮಾತನ್ನು ನಾನು ಒಪ್ಪುತ್ತೇನೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ನಾನು ಪ್ರಶ್ನೆ ಕೇಳಿರುವ ಮೂಲ ಉದ್ದೇಶ ಇಷ್ಟೆ, ಬೆಂಗಳೂರಿನಲ್ಲಿ ಸ್ವಂತ ಮನೆ ಇಟ್ಟುಕೊಂಡು ಕ ಡಹೌಸ್ ರೆಂಟ್ ಕಂಟ್ರೋಲರವರಿಂದ ಮನೆ ಅಲಾಟ್ ಮಾಡಿಸಿಕೊಳ್ಳುವ ಇಂತಹ ಕೆಟ್ಟ ಚಾಳಿ ನಡೆಯುತ್ತಿದೆ. ಈಗ ನಾನು ಕೇಳಿರುವ ಪ್ರಶ್ನೆಗೆ ಮೂರು ಹೆಸರುಗಳನ್ನು ಕೊಟ್ಟಿದ್ದೀರಿ. ಶ್ರೀ ಜಿ.ವಿ.ಕೆ. ರಾವ್, ಐ.ಎಸ್. ಕೇದಾರ್, ಮತ್ತು ಎಂ. ಎನ್. ನಾಗರಾಜ್ ಎಂದು ಇವರಿಗೆ ಬೆಂಗಳೂರಿನಲ್ಲಿ ಮನೆ ಇಲ್ಲವೇ ಎಂಬುದನ್ನು ತಾವು ದಯವಿಟ್ಟು ತನಿಖೆ ಮಾಡಬೇಕು.

ಶ್ರೀ ಕೆ ಹೆಚ್. ಪಾಟೀಲ್.—ತಾವು ನಮ್ಮ ಗಮನಕ್ಕೆ ತಂದಿದ್ದೀರಿ, ಇವೊತ್ತೇ ತನಿಖೆ ಮಾಡುತ್ತೇನೆ. ಮನೆ ಇದ್ದರೆ ಮನೆ ಕೊಡಬೇಕು ಎಂದು ರೆಂಟ್ ಕಂಟ್ರೋಲ್‌ನಲ್ಲಿ ನಿಯಮ ಇಲ್ಲ. ಮನೆ ಇದ್ದವರಿಗೆ ಕೊಡಬಾರದು. ಅವರು ಮನೆ ಇಲ್ಲವೆಂದು ಹೇಳಿದರೆ ರೆಂಟ್ ಕಂಟ್ರೋಲ್‌ನವರು ಅಲಾಟ್ ಮಾಡುತ್ತಾರೆ. ಆದರೂ ತಾವು ಇವರಿಗೆ ಮನೆಗಳಿವೆ ಎಂದು ನನ್ನ ನಜರಿಗೆ ತಂದಿದ್ದೀರಿ. ಈ ಬಗ್ಗೆ ಎಂಕ್ವೈರಿ ಮಾಡುತ್ತೇನೆ.

ಸರ್ವೆ ಇಲಾಖೆಯಲ್ಲಿ ಗ್ರಾಮದ ನಕಾಶೆಗಳು ಸರಿಯಾಗಿ ರೈತರಿಗೆ ಸಿಕ್ಕುತ್ತಿಲ್ಲವೆಂಬುದರ ಬಗ್ಗೆ

೪೯೮ (೧೬೫೦) ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರ್ವೆ ಇಲಾಖೆಯಲ್ಲಿ ಗ್ರಾಮದ ನಕಾಶೆಗಳು ಸರಿಯಾಗಿ ರೈತರಿಗೆ ಸಿಕ್ಕುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಬಗ್ಗೆ ಪ್ರಿಂಟ್ ಹಾಕಲು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಇ) ರೈತರಿಗೆ ಗ್ರಾಮದ ನಕಾಶೆಗಳು ಸಿಗುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಹೌದು.

ಆ) ನಕಾಶೆಗಳನ್ನು ಮುದ್ರಿಸಲು ಸುಮಾರು ೨೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಧುನಿಕ ಯಂತ್ರವನ್ನು ಖರೀದಿಸಲಾಗುತ್ತದೆ.

ಇ) ನೂತನವಾಗಿ ಪಡೆಯುವ ಯಂತ್ರದ ಮೂಲಕ ಅಗತ್ಯವಿರುವಷ್ಟು ನಕಾಶೆಗಳ ಪ್ರತಿಗಳನ್ನು ತಯಾರಿಸಿ ರೈತರಿಗೆ ಒದಗಿಸುವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ. ಪಿ. ವೆಂಕಟೇಶ್.—ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಮೊದಲನೇ ಪ್ರಶ್ನೆಗೆ ಹೌದು ಎಂದು ಉತ್ತರ ನೀಡಿದ್ದಾರೆ. ಎರಡನೇ ಪ್ರಶ್ನೆಗೆ ನಕಾಶೆಗಳನ್ನು ಮುದ್ರಿಸಲು ಸುಮಾರು ೨೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಧುನಿಕ ಯಂತ್ರವನ್ನು ಖರೀದಿಸಲಾಗುತ್ತಿದೆ. ಎಂದು ಹೇಳಿದ್ದಾರೆ. ಯಾವಾಗ ಖರೀದಿ ಮಾಡುತ್ತಾರೆ ಎಂದು ನಾನು ಕೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಖರೀದಿಸಲಾಗುತ್ತದೆ ಎಂದ ಹೇಳಿದರೆ ಕೂಡಲೇ ಖರೀ ಮಾಡ ಬೇಕು ಎಂದು ಸರ್ಕಾರದ ಯೋಜನೆ. ಇವೊತ್ತು ಹೊಂದ ಕೂಡಲೇ ಖರೀದಿ ಮಾಡಲು ಆಗಡಿ ಯೊಳಗೆ ಸಕ್ಕರೆ ಸಿಕ್ಕ ಹಾಗೆ ಸಿಗುತ್ತದೆಯೇ ? ಮೆಷಿನರಿ ತಯಾರಾಗಬೇಕು. ಅದು ಸ್ಪೆಷಲ್ ಟೈಪ್ ಆಫ್ ಮೆಷನರಿ ಇದೆ. ಹೆಚ್.ಎಂ.ಟಿ.ನವರು ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಎಷ್ಟು ಲಘು ಸಾಧ್ಯವಿದೆ ಅಷ್ಟು ಬೇಗ ಖರೀದಿ ಮಾಡುತ್ತೇನೆ. ಮೆಷಿನರಿಗೆ ಆರ್ಡರ್ ಕೊಟ್ಟಿದ್ದೇವೆ. ವಿಶಿಷ್ಟ ತರಗತಿ ಮೆಷನರಿ ಇರುವುದರಿಂದ ಮಾರ್ಕೆಟ್‌ನಲ್ಲಿ ಲಭ್ಯ ಆಗುವ ಮೆಷನರಿ ಅಲ್ಲ. ನಕಾಶೆಗಳು ತೆಗೆಯಬೇಕಾಗಿದೆ. ಹೊಸದಾಗಿ ಈಗ ಕಂಪ್ಯೂಟರೈಸೇಷನ್‌ನೊಳಗೆ ಸಹಿತ ತೆಗೆಯಬೇಕೆಂದು ಬಂದಿದೆ. ಮಧ್ಯ ಪ್ರದೇಶದವರು ಅದನ್ನು ಹಾಕಿದ್ದಾರೆ. ಮಧ್ಯ ಪ್ರದೇಶಕ್ಕೆ ನಾನು ಅಧಿಕಾರಿಗಳನ್ನು ಕಳಿಸಿ ಪರೀಕ್ಷೆ ಮಾಡುತ್ತೇನೆ. ಅದು ಸೂಕ್ತ ಆದರೆ ಅದನ್ನು ಮಾಡೋಣ. ಇಲ್ಲದಿದ್ದರೆ ನಮ್ಮ ಹೆಚ್.ಎಂ.ಟಿ. ನವರು ತಯಾರು ಮಾಡತಕ್ಕ ಮೆಷಿನರಿ ಅನ್ನು ತೆಗೆದುಕೊಳ್ಳಿಣ.

ಶ್ರೀ ಎಂ ಪಿ ವೆಂಕಟೇಶ್.—ಇದರಿಂದ ರೈತರಿಗೆ ಬಹಳ ತೊಂದರೆ ಆಗಿದೆ. ಸರ್ಕಾರ ಕೂಡಲೇ ಪ್ರಯತ್ನ ಮಾಡಿ ತರಿಸಿ ಸಾರ್ವಜನಿಕರಿಗೆ ಮತ್ತು ರೈತರಿಗೆ ಕೂಡಲೇ ಸಹಾಯ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ರೈತರಿಗೆ ಅಷ್ಟೆ ಅಲ್ಲ ಆಫೀಸರ್‌ಗಳಿಗೂ ಸಹ ಇದರಿಂದ ಬಹಳ ತೊಂದರೆ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ನಿಜವಾಗಿಯೂ ತೀವ್ರಗತಿಯಿಂದ ಈ ಬಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಜಿ. ರಾಜು (ಸಹಕಾರ ಸಚಿವರು).—ಮಾನ್ಯ ಉಪಾಧ್ಯಕ್ಷಣಿಯವರೇ, ೪೯೯ (೧೫೧೯ಕ್ಕೆ) ಪ್ರಶ್ನೆ ಸಂಖ್ಯೆ ಸ್ವಲ್ಪ ಟೈಮ್ ಬೇಕು.

ಉಪಾಧ್ಯಕ್ಷರು.—ಇದನ್ನು ಮುಂದಕ್ಕೆ ಹಾಕಲಾಗಿದೆ.

ರಾಜ್ಯದ ಪ್ರತಿಹಳ್ಳಿಗಳಲ್ಲಿ ಗೋಮಾಳ ಭೂಮಿಯ ವಿಸ್ತೀರ್ಣ

೫೦೦ (೧೪೧೦ ಬಿ) ಶ್ರೀ ನಾರಯಣ ಮನೋಳಿ (ಬೀದರ್).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಪ್ರತಿಗ್ರಾಮದಲ್ಲಿ ಗೋವುಗಳು ಮೇಯಲು "ಗೋಮಾಳ" ವೆಂದು ನಿಗಧಿಪಡಿಸಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಗೋಮಾಳವು ಸಾಕಷ್ಟಿದೆಯೇ ?

ಇ) ಇಲ್ಲದಿದ್ದಲ್ಲಿ, ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುತ್ತದೆ. ?